**ದಿನಾಂಕಃ 06.05.2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ಕಡ್ಲೆ ಕೀಳಲು ಸುಮಾರು 25 ಜನ ಚಿಕ್ಕಕಾಟ್ಲಹಟ್ಟಿ ಗ್ರಾಮದಿಂದ ಮೇಟಿಕುರ್ಕೆಗೆ ಟೆಂಪೋದಲ್ಲಿ ಹೋಗುತ್ತಿದ್ದೆವು . ಮೇಟಿ ಕುರ್ಕೆ ಹತ್ತಿರ ಟೆಂಪೋ ಅಪಘಾತವಾಗಿರುತ್ತದೆ. ಟೆಂಪೋ ನಂಬರ್ ಗೊತಿತಲ್ಲ. ಆರೋಪಿ ಅನಿಲ್ ರವರು ಟೆಂಪೋವನ್ನು ಚಾಲನೆ ಮಾಡುತ್ತಿದ್ದರು. ಟೆಂಪೋ ಆ ದಿನ ಅತಿವೇಗವಾಗಿ ಹೋಗುತ್ತಿತ್ತು. ಅಪಘಾತದಿಂದ ನನ್ನ ಕೈಗೆ , ಕಾಲಿಗೆ ಪೆಟ್ಟಾಗಿತ್ತು. ಸೂರಮ್ಮನವರು ಸ್ಥಳದಲ್ಲಿ ಮೃತಪಟ್ಟಿದ್ದರು. ಕಾಟಯ್ಯ, ರಂಗಪ್ಪ , ನರೇಂದ್ರ ಶಿವಯ್ಯ, ಶಿವಮ್ಮ , ಗಂಗಮ್ಮ ಅಮರೇಶ್ ರವರಿಗೆಲ್ಲಾ ಪೆಟ್ಟಾಗಿತ್ತು. ಇತರರಿಗೂ ಸಹ ಪೆಟ್ಟಾಗಿತ್ತು. ಇತರರಿಗೂ ಸಹ ಸಣ್ಣ ಪುಟ್ಟಗಾಯಗಳು ಆಗಿದ್ದವು. ನಂತರ ನಾವು ಹಿರಿಯೂರು ಆಸ್ಪತ್ರೆಗೆ ಹೋಗಿದ್ದೆವು. ಈ ಅಪಘಾತ ಆನಂದ್ ರವರ ತಪ್ಪಿನಿಂದ ಆಗಿರುತ್ತದೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿದ್ದಾರೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

03.02.2018 ರಂದು ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತದ ಪಡಿಸಿದ ವಾಹನ ನಂ. ಕೆಎ 16 ಬಿ 7057 ಎಂದರೆ ನಿಜ .

**ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ ಎಲ್ ಎಸ್ ವಕೀಲರಿಂದ–**

ಆ ದಿನ 25 ಜನ ಗಾಡಿಯಲ್ಲಿ ಹೋಗುತ್ತಿದ್ದೆವು. ವಾಹನದ ಹಿಂಬದಿಯಲ್ಲಿ ಕುಳಿತ್ತಿದ್ದೆವು. ಕ್ಯಾಬಿನಲ್ಲಿ ಮೂರು ಜನ ಕುಳಿತಿದ್ದರು. ಕ್ಯಾಬಿನಲ್ ನಲ್ಲಿ ಭಾಗಮ್ಮ , ಹಂಪಮ್ಮ ಅನಿಲ , ಕಾಟಯ್ಯ ಕುಳಿತಿದ್ದರು. ಯಾರ ಜಮೀನಿಗೆ ಕಡ್ಲೆ ಗಿಡ ಕೀಳಲು ಹೋಗುತ್ತಿದ್ದೆವು ಎಂದು ಗೊತ್ತಿಲ್ಲ ಅನಿಲ ಕರೆದು ಕೊಂಡು ಹೋಗುತ್ತಿದ್ದ ನಾವು ಹೋಗುತ್ತಿದ್ದೆವು ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಸಾಕ್ಷಿಗೆ ತಲೆ ಸುತ್ತು ಬಂದಿದೆ ಎಂದು ಮುಂದಿನ ದಿನಾಂಕವನ್ನು ಕೋರಿದ್ದು ಮುಂದಿನ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು